ದಿಃ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : 6 ನೇ ಪ್ರತಿವಾದಿಯ ಪರ ಶ್ರೀ. ಆರ್.ಆರ್ ವಕೀಲರಿಂದಃ**

ನನಗೆ ತಿಳಿಯದಂತೆ ಆಸ್ತಿಯನ್ನು ಮಾರಾಟ ಮಾಡಿರುವ ಕಾರಣ ಈ ದಾವೆಯನ್ನು ಹೂಡಿದ್ದೇನೆ. ದಾವಾ ಆಸ್ತಿಯು ಮೂಲತಃ ನನ್ನ ತಾತನಿಗೆ ಸೇರಿದ್ದು. ನನ್ನ ತಾತನಿಗೆ ಸೇರಿದ್ದು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿದ್ದೇನೆ. ಮಾರಾಟ ಮಾಡುವ ಕಾಲಕ್ಕೆ ಪಹಣಿ ನನ್ನ ತಾತ ಮತ್ತು ತಂದೆಯ ಹೆಸರಿನಲ್ಲಿ ಇತ್ತು. ನನ್ನ ತಂದೆ ಅಥವಾ ಗಂಡನ ಹೆಸರನ್ನು ವಾದ ಪತ್ರದ ಶಿರೋನಾಮೆಯಲ್ಲಿ ನಮೂದಿಸಿಲ್ಲ. ನನ್ನ ಗಂಡನ ಹೆಸರು ದೇವರಾಜು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಗಂಡನ ಹೆಸರು ಸಿ.ಜಿ ರಾಜಣ್ಣ ಎಂದು ತಪ್ಪಾಗಿ ನಮೂದಾಗಿದೆ. ನಾನು ನಿಪಿ-1 ಕ್ಕೆ ದಿನಾಂಕ 24.03.2017 ರಂದು ಸಹಿ ಮಾಡಿರುತ್ತೇನೆ. ನನ್ನ ತಂದೆ ರಾಜಣ್ಣ ಮತ್ತು ತಾಯಿ ಪಾರ್ವತಮ್ಮ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿದ್ದೇನೆ. ನನ್ನ ತಂದೆಯ ಹೆಸರಿನಲ್ಲಿ ಒಟ್ಟು 2 ಆಸ್ತಿಗಳು ಇವೆ. ಈ ದಾವೆಯನ್ನು ಹೂಡಿದ ನಂತರ ಒಂದು ಆಸ್ತಿಯನ್ನು ಮಾರಾಟ ಮಾಡಿದ್ದೇವೆ.

ದಾವೆ ಹೂಡಿದ ನಂತರ ಒಂದು ಆಸ್ತಿಯನ್ನು ಮಾರಾಟ ಮಾಡಿದ ಸಮಯದಲ್ಲಿ ದಾವೆ ಹೂಡಿದ ಪೂರ್ವದಲ್ಲಿ ಮಾರಾಟ ಮಾಡಿದ ಇನ್ನೊಂದು ಆಸ್ತಿಯಲ್ಲಿ ಪಾಲನ್ನು ನಾನು ಕೇಳಿದ್ದೆ. ಒಂದು ವರೆ ವರ್ಷದ ಹಿಂದೆ ಸರ್ವೆ ನಂ.139/8 ರ ಆಸ್ತಿಯನ್ನು ಮಾರಾಟ ಮಾಡಿದ್ದೇನೆ. ಸದರಿ ಸರ್ವೆ ನಂ.139/8 ರ 1 ಎಕರೆ 24 ಗುಂರೆ ಜಮೀನನ್ನು ಮಾರಾಟ ಮಾಡಿರುವ ವಿಚಾರವನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದೇನೆ. ದಾವೆ ಹೂಡುವ ಕಾಲಕ್ಕೆ ನಾನು ಮತ್ತು ನನ್ನ ಸಹೋದರರು ಚೆನ್ನಾಗಿ ಇದ್ದೆವು. ನನ್ನ ತಂದೆಗೆ ಒಟ್ಟು 5 ಎಕರೆ 24 ಗುಂಟೆ ಜಮೀನು ಇತ್ತು. ನಿಪಿ-5 ರಂತೆ ನಮ್ಮ ಕುಟುಂಬಕ್ಕೆ 7 ಎಕರೆ 18 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿಯು ತನ್ನ ತಂದೆ ಸ್ವಲ್ಪ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ಮಾರಾಟ ಮಾಡಿದ ಆಸ್ತಿಯನ್ನು ಹೊರತುಪಡಿಸಿ ಉಳಿದ 1 ಎಕರೆ 24 ಗುಂಟೆ ಜಮೀನಿನಲ್ಲಿ ನನಗೆ ಭಾಗ ಕೊಡುವಂತೆ ನನ್ನ ಸಹೋದರರಿಗೆ 6 ನೇ ಪ್ರತಿವಾದಿ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ 6 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಅಕ್ಕ ಅಣ್ಣಮ್ಮನಿಗೆ ಆದಂತಹ ಕ್ರಯ ಪತ್ರವನ್ನು ನಾನು ಪ್ರಶ್ನಿಸಿಲ್ಲ. ಸದರಿ ವಿಚಾರನ ನನಗೆ ಮೊದಲೇ ಗೊತ್ತಿರುವುದರಿಂದ ಸದರಿ ಕ್ರಯ ಪತ್ರವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ

ನಂ.131/1 ಮತ್ತು 131/8 ಅಕ್ಕ ಪಕ್ಕದಲ್ಲಿ ಇವೆ. ಎರಡೂ ಆಸ್ತಿಗಳಿಗೂ ಒಂದೇ ಚೆಕ್ಕುಬಂದಿ ಇದೆ. ನಾನು 3 ಎಕರೆ ಜಮೀನಿನಲ್ಲಿ ಪಾಲು ಕೇಳುತ್ತಿದ್ದೇನೆ. 1 ಎಕರೆ 24 ಗುಂಟೆ ಜಮೀನನ್ನು ನನ್ನ ಇಚ್ಛೆಯಿಂದ ಮಾರಾಟ ಮಾಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. 6 ನೇ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಒಟ್ಟು ಎಷ್ಟು ಆಸ್ತಿಗಳು ನನ್ನ ತಾತನಿಂದ ಬಂದವು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮಗೆ ಮನೆ ಮತ್ತು ನಿವೇಶನ ಆಸ್ತಿಗಳು ಇಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು